ಕರ್ನಾಟಕ ಸರ್ಕಾರ

# ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬಳ್ಳಾರಿ.

**OFFICE OF THE DEPUTY DIRECTOR, WOMEN AND CHILD DEVELOPMENT DEPARTMENT, BELLARY - 583102**

**Telephone : 08392-266219.** **Email : dwcdbellary@gmail.com**

**ಸಂಖ್ಯೆ/ಉನಿಬ/ಮಮಅಇ/ಐಸಿಡಿ/ಅಂ.ಕ/ಅಂ.ಸ/ಆಯ್ಕೆ/2021-22** **ದಿನಾಂಕ : 18-02-2022**

## ಅಧಿಸೂಚನೆ

ಸರ್ಕಾರದ ಆದೇಶ ಸಂಖ್ಯೆ /ಮಮಇ/303/ಐಸಿಡಿ/2017, ದಿನಾಂಕ : 23-09-2017 ಮತ್ತು ದಿನಾಂಕ: 17.02.2021ರಲ್ಲಿ ತಿಳಿಸಿದ ಮಾರ್ಗಸೂಚಿಗಳಂತೆ ಮಾನ್ಯ ಜಿಲ್ಲಾಧಿಕಾರಿಗಳು, ಬಳ್ಳಾರಿ ಇವರು ಅನುಮೋದಿಸಿದಂತೆ, ಬಳ್ಳಾರಿ ಜಿಲ್ಲೆಯ 4 ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯಲ್ಲಿ ಖಾಲಿ ಇರುವ 17 ಅಂಗನವಾಡಿ ಕಾರ್ಯಕರ್ತೆ ಮತ್ತು 76 ಅಂಗನವಾಡಿ ಸಹಾಯಕಿಯರ ಗೌರವ ಹುದ್ದೆಗಳನ್ನು ಭರ್ತಿ ಮಾಡಲು ಆನ್‌ಲೈನ್ ಮೂಲಕ ಅರ್ಹ ಮಹಿಳಾ ಅಭ್ಯಥಿಗಳಿಂದ (ಅದೇ ಗ್ರಾಮ /ವಾರ್ಡಿನವರು) ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಹಾಗೂ ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಾಖಲೆಗಳು ಮತ್ತು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ವಿವರಗಳು ಈ ಕೆಳಗಿನಂತಿವೆ.

| | |
|---|---|
| ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಪ್ರಾರಂಭದ ದಿನಾಂಕ | 22-02-2022 |
| ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | 23-03-2022 ರಂದು ಸಂಜೆ : 5.30 ರೊಳಗೆ |
| ವೆಬ್ ಸೈಟ್ ವಿಳಾಸ | www.anganwadirecruit.kar.nic.in |

**ಸೂಚನೆಗಳು :**

1. ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿ ಹುದ್ದೆಗಳಿಗೆ ಅರ್ಜಿಗಳನ್ನು ಆನ್‌ಲೈನ್(Online) ನಲ್ಲಿ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.
2. ಅಭ್ಯರ್ಥಿಗಳು Online ನಲ್ಲಿ ಅರ್ಜಿ ಸಲ್ಲಿಸುವಾಗ ಸರ್ಕಾರ ಹೊರಡಿಸಿದ ನೇಮಕಾತಿ ಮಾರ್ಗಸೂಚಿ/ನಿಬಂಧನೆಗಳನ್ನು ಓದಿಕೊಂಡು ನಿಗದಿಪಡಿಸಿದ ದಾಖಲಾತಿಗಳೊಂದಿಗೆ ಆನ್‌ಲೈನ್‌ನಲ್ಲಿ ಭರ್ತಿ ಮಾಡುವುದು. ಅಂಗನವಾಡಿ ಕಾರ್ಯಕರ್ತೆ ಗೌರವಧನ ರೂ.10,000/- ಮಿನಿ ಕಾರ್ಯಕರ್ತೆ ರೂ.6250/-, ಸಹಾಯಕಿಯ ಗೌರವಧನ ರೂ.5000/-ಆಗಿರುತ್ತದೆ.
3. ಇಲಾಖೆಯ ಸಂಸ್ಥೆಗಳ ನಿವಾಸಿಗಳ ಆಯ್ಕೆ : - ಸರ್ಕಾರದ ಆದೇಶ ಸಂ/ಮಮಇ/303/ಐಸಿಡಿ/2017, ದಿನಾಂಕ ದಿನಾಂಕ : 19-01-2019ರ ತಿದ್ದುಪಡಿ ಆದೇಶದಂತೆ ಅಂಗನವಾಡಿ ಕಾರ್ಯಕರ್ತೆ / ಸಹಾಯಕಿ ಹುದ್ದೆಗಳಿಗೆ ಬಾಲನ್ಯಾಯ ಕಾಯ್ದೆಯಡಿ ಇಲಾಖೆಯ ಸಂಸ್ಥೆಗಳಲ್ಲಿ ಹಾಗೂ ರಾಜ್ಯ ಮಹಿಳಾ ನಿಲಯಗಳಲ್ಲಿ ಆಶ್ರಯ ಪಡೆದ ಹಾಲಿ / ಮಾಜಿ ನಿವಾಸಿಗಳು ಅರ್ಜಿ ಸಲ್ಲಿಸಿದಾಗ ಮಾರ್ಗಸೂಚಿಯ ಕ್ರಮ ಸಂಖ್ಯೆ 3 (1)ನೆಯವರನ್ನು ಹೊರತುಪಡಿಸಿ ಇತರೆ ಎಲ್ಲಾ ಸ್ವೀಕೃತ ಅರ್ಜಿಗಳನ್ನು ಪರಿಗಣಿಸದೇ ಎರಡನೇ ಅದ್ಯತೆ ಮೇರೆಗೆ ನೇರವಾಗಿ ಅವರನ್ನೇ ಆಯ್ಕೆ ಮಾಡತಕ್ಕದ್ದು. ಇವರಿಗೆ ವಾಸಸ್ಥಳ ದೃಢೀಕರಣ ಕಡ್ಡಾಯವಲ್ಲ.
4. ಅನ್‌ಲೈನ್ ಮೂಲಕ ಮಾತ್ರ ದಾಖಲಾತಿಗಳ ಸಲ್ಲಿಕೆಗೆ ಅವಕಾಶ ಇರುತ್ತದೆ. ನಂತರ ಕಛೇರಿಗೆ ಅಭ್ಯರ್ಥಿಯಿಂದ ಯಾವುದೇ ದಾಖಲಾತಿಗಳನ್ನು ಸ್ವೀಕರಿಸಲಾಗುವುದಿಲ್ಲ.
5. ಲಕೋಟೆಯಿಂದ ಬಂದ ಅರ್ಜಿಗಳನ್ನು ಅಯ್ಕೆಗೆ ಪರಿಗಣಿಸಲಾಗುವುದಿಲ್ಲ.
6. ಆನ್‌ಲೈನ್ ಅರ್ಜಿಯೊಂದಿಗೆ ಯಾವುದೇ ಅಗತ್ಯ ದಾಖಲೆ ಸಲ್ಲಿಸಿದೇ ಇದ್ದಲ್ಲಿ ಅಂತಹ ಅರ್ಜಿಯನ್ನು ತಿರಸ್ಕರಿಸಲಾಗುವುದು.

7. ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಹುದ್ದೆಯು ಸಂಪೂರ್ಣವಾಗಿ ಗೌರವ ಸೇವೆಯಾಗಿದ್ದು, ಖಾಯಂ ಹುದ್ದೆಯಾಗಿರುವುದಿಲ್ಲ.
8. ಆಯ್ಕೆ ಪ್ರಕ್ರಿಯೆಯಲ್ಲಿ ಯಾವುದೇ ಸಮಸ್ಯೆ ಉದ್ಭವಿಸಿದಲ್ಲಿ ಆಯ್ಕೆ ಸಮಿತಿಯ ನಿರ್ಧಾರವೇ ಅಂತಿಮವಾಗಿರುತ್ತದೆ.
9. ಕನಿಷ್ಠ 18 ವರ್ಷದಿಂದ 35 ವರ್ಷ ವಯೋಮಿತಿಯೊಳಗಿನ ಅಭ್ಯರ್ಥಿಗಳಿಗೆ ಮಾತ್ರ ಅರ್ಜಿ ಹಾಕಲು ಅರ್ಹರಾಗಿರುತ್ತಾರೆ.
10. ಅಂಗನವಾಡಿ ಕಾರ್ಯಕರ್ತೆಯರ ಹುದ್ದೆಗೆ ವಿಕಲಚೇತನರಿಗೆ 10 ವರ್ಷ ವಯೋಮಿತಿ ಸಡಿಲಿಕೆಯನ್ನು ನೀಡಿದೆ.
11. ಅಂಗನವಾಡಿ ಕೇಂದ್ರಗಳಿಗೆ ನಿಗಧಿಪಡಿಸಿದ ಮೀಸಲಾತಿ ಅನುಗುಣವಾಗಿ ಅನ್ ಲೈನ್ ನಲ್ಲಿ ಅರ್ಜಿಗಳನ್ನು ಸಲ್ಲಿಸಲು ಅವಕಾಶವಿರುತ್ತದೆ.
12. ಅಭ್ಯರ್ಥಿಗಳು Online ನಲ್ಲಿ ಅರ್ಜಿಯನ್ನು ಭರ್ತಿ ಮಾಡುವಾಗ ಸರಿಯಾಗಿ ದಾಖಲಾತಿಗಳಲ್ಲಿ ಇರುವ ಮಾಹಿತಿಯನ್ನು ಭರ್ತಿ ಮಾಡತಕ್ಕದ್ದು. ಒಂದು ವೇಳೆ ಭರ್ತಿ ಮಾಡುವಾಗ ತಪ್ಪಾಗಿ ಮಾಹಿತಿ ನಮೂದಿಸಿದಲ್ಲಿ ಅಂತಹ ಅರ್ಜಿಗಳು ಆನ್‌ಲೈನ್‌ನಲ್ಲಿ ತಿರಸ್ಕೃತಗೊಂಡಲ್ಲಿ ಅಂತಹ ಅಭ್ಯರ್ಥಿಗಳ ಅರ್ಜಿಗಳಿಗೆ ಅವರೇ ನೇರ ಹೊಣೆಗಾರರಾಗಿರುತ್ತಾರೆ ಎಂದು ತಿಳಿಯತಕ್ಕದ್ದು.
13. ಅಭ್ಯರ್ಥಿಗಳು ನಿಗದಿಪಡಿಸಿದ ಮಾಹಿತಿಯಂತೆ ದಾಖಲಾತಿಗಳನ್ನು ಆನ್‌ಲೈನ್ (Online) ನಲ್ಲಿ Upload ಮಾಡದೇ ಅರ್ಜಿ ತಿರಸ್ಕೃತಗೊಂಡಲ್ಲಿ ಅಂತಹ ಅರ್ಜಿಗಳಿಗೆ ಅಭ್ಯರ್ಥಿಗಳೇ ನೇರ ಹೊಣೆಗಾರರಾಗಿರುತ್ತಾರೆ.
14. Online ನಲ್ಲಿ ಅಭ್ಯರ್ಥಿಗಳು Upload ಮಾಡಬೇಕಾದ ದಾಖಲಾತಿಗಳು ಸ್ಪಷ್ಟತೆಯಿಂದ ಕೂಡಿರತಕ್ಕದ್ದು. ಒಂದು ವೇಳೆ ದಾಖಲಾತಿಗಳು ಸ್ಪಷ್ಟತೆ ಇಲ್ಲದೇ Upload ಮಾಡಿದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಇದಕ್ಕೆ ಅಭ್ಯರ್ಥಿಗಳೇ ನೇರ ಹೊಣೆಗಾರರಾಗಿರುತ್ತಾರೆ.
15. ಅಂಗನವಾಡಿ ಕೇಂದ್ರಗಳಲ್ಲಿ ಖಾಲಿ ಇರುವ ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಅಯಾ ಗ್ರಾಮೀಣ ಪ್ರದೇಶದ ಗ್ರಾಮದ/ ನಗರ ಪ್ರದೇಶದ ವಾರ್ಡ್‌ನ ನಿವಾಸಿಗಳಾಗಿರಬೇಕು.
16. ಒಂದು ಗ್ರಾಮದಲ್ಲಿ ಒಂದಕ್ಕಿಂತ ಹೆಚ್ಚು ಅಂಗನವಾಡಿ ಕೇಂದ್ರಗಳಿದ್ದಾಗ, ಆ ಕೇಂದ್ರ ವ್ಯಾಪ್ತಿಗೆ ಸಂಬಂಧಪಟ್ಟ ಅಯಾ ಗ್ರಾಮೀಣ ಪ್ರದೇಶದ ಗ್ರಾಮದ/ ನಗರ ಪ್ರದೇಶದ ವಾರ್ಡ್‌ರವರಿಂದ ಮಾತ್ರ ಅರ್ಜಿಗಳನ್ನು ಆಹ್ವಾನಿಸಬೇಕು. ಒಂದು ಪಕ್ಷ ಆ ಗ್ರಾಮ/ವಾರ್ಡ್‌ರವರಿಂದ ಅರ್ಜಿಗಳು ಸ್ವೀಕೃತವಾಗದೇ ಹೋದಲ್ಲಿ 7 ದಿವಸಗಳೊಳಗೆ ಮರು ಪ್ರಕಟಣೆ ಹೊರಡಿಸಬೇಕು. ಎರಡನೆಯ ಬಾರಿಯೂ ಸ್ಥಳೀಯರಿಂದ ಅರ್ಜಿ ಸ್ವೀಕೃತವಾಗದಿದ್ದಲ್ಲಿ ಪುನಃ 10 ದಿವಸಗಳೊಳಗೆ ಪ್ರಕಟಣೆ ಹೊರಡಿಸಿ ಅತ್ಯಂತ ಸಮೀಪದ ಅಯಾ ಗ್ರಾಮೀಣ ಪ್ರದೇಶದ ಗ್ರಾಮದ/ ನಗರ ಪ್ರದೇಶದ ವಾರ್ಡ್‌ಗಳಿಂದ ಅರ್ಹ ಅಭ್ಯರ್ಥಿಗಳನ್ನು ಆಯ್ಕೆಗೆ ಪರಿಗಣಿಸುವುದು.
17. ಖಾಲಿ ಇರುವ ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಹುದ್ದೆಗಳಿಗೆ ವಿಧವೆಯರು ಅರ್ಜಿ ಸಲ್ಲಿಸಿದ್ದಲ್ಲಿ ಕಡ್ಡಾಯವಾಗಿ ಗಂಡನ ಮರಣ ಪ್ರಮಾಣಪತ್ರ ಲಗತ್ತಿಸತಕ್ಕದ್ದು. (ವಿಧವೆ ಪಿಂಚಣಿ ಪ್ರಮಾಣಪತ್ರವನ್ನು ಪರಿಗಣಿಸುವುದಿಲ್ಲ) ಒಂದು ವೇಳೆ ದಾಖಲಾತಿ ಲಗತ್ತಿಸದಿದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
18. ಶೇಕಡ 25ಕ್ಕಿಂತ ಹೆಚ್ಚು ಅಲ್ಪಾ ಸಂಖ್ಯಾತ (ಮುಸ್ಲಿಂರು, ಕ್ರೀಷನ್‌ರು, ಜೈನರು, ಬೌಧರು, ಪರ್ಸಿಗಳು ಮತ್ತು ಸಿಕ್ಕರು) ಜನಸಂಖ್ಯೆ ಇರುವ ಅಂಗನವಾಡಿ ಕೇಂದ್ರಗಳಲ್ಲಿ ಅದೇ ಸಮುದಾಯದವರಲ್ಲಿ ಕನ್ನಡ ಭಾಷೆಯೊಂದಿಗೆ ಆಯಾ ಅಲ್ಪ ಸಂಖ್ಯಾತ ಸಮುದಾಯದ ಭಾಷೆ ಬಲ್ಲವರನ್ನು ಕಾರ್ಯಕರ್ತೆ/ ಸಹಾಯಕಿಯ ಹುದ್ದೆಗೆ ಆಯ್ಕೆಗೆ ಪರಿಗಣಿಸಲಾಗುವುದು.

19. Online ನಲ್ಲಿ ವಿದ್ಯಾರ್ಹತೆ ಮತ್ತು ಪಡೆದ ಅಂಕಗಳನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು. ಒಂದು ವೇಳೆ ಗ್ರೇಡ್/ಸೆಮಿಸ್ಟರ್ ಪದ್ಧತಿಯ ಅಂಕಪಟ್ಟಿ ಲಗತ್ತಿಸುವಾಗ ಕಡ್ಡಾಯವಾಗಿ ಪಡೆದ ಅಂಕದ ಮಾಹಿತಿಯನ್ನು ಶಾಲೆಯಿಂದ ಪಡೆದು ನಮೂದಿಸಿ ದಾಖಲಾತಿಯನ್ನು Online ನಲ್ಲಿ Upload ಮಾಡತಕ್ಕದ್ದು.
20. ಅಂಗನವಾಡಿ ಕಾರ್ಯಕರ್ತೆಯರ ಹುದ್ದೆಗೆ ಅರ್ಜಿ ಸಲ್ಲಿಸುವಾಗ ಕಡ್ಡಾಯವಾಗಿ ಎಸ್.ಎಸ್.ಎಲ್.ಸಿ. ಅಂಕಪಟ್ಟಿ ಸಲ್ಲಿಸತಕ್ಕದ್ದು. (ಹೆಚ್ಚಿನ ವಿದ್ಯಾಭ್ಯಾಸದ ಅಂಕಪಟ್ಟಿಯನ್ನು ಪರಿಗಣಿಸಲಾಗುವುದಿಲ್ಲ) ತಪ್ಪಿದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕೃತಗೊಳಿಸಲಾಗುವುದು.
21. ಅಂಗನವಾಡಿ ಸಹಾಯಕಿಯರ ಹುದ್ದೆಗೆ ಅರ್ಜಿ ಸಲ್ಲಿಸುವಾಗ ಕಡ್ಡಾಯವಾಗಿ 4ನೇ ತರಗತಿಯಿಂದ 9ನೇ ತರಗತಿ ಉತ್ತೀರ್ಣ ಹೊಂದಿರತಕ್ಕದ್ದು. ಒಂದು ವೇಳೆ ಎಸ್.ಎಸ್.ಎಲ್.ಸಿ. ಉತ್ತೀರ್ಣರಾಗಿದ್ದರೂ ಸಹ, ಕಡ್ಡಾಯವಾಗಿ 9ನೇ ತರಗತಿ ಅಂಕಪಟ್ಟಿ ಸಲ್ಲಿಸತಕ್ಕದ್ದು. (ಹೆಚ್ಚಿನ ವಿದ್ಯಾಭ್ಯಾಸದ ಅಂಕಪಟ್ಟಿಯನ್ನು ಪರಿಗಣಿಸಲಾಗುವುದಿಲ್ಲ) ತಪ್ಪಿದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕೃತಗೊಳಿಸಲಾಗುವುದು.
22. Online ಅರ್ಜಿ ಭರ್ತಿ ಮಾಡುವಾಗ ಜನ್ಮ ದಿನಾಂಕ ಅಥವಾ ವಿದ್ಯಾರ್ಹತೆ, ಅಂಕಪಟ್ಟಿ ಮಾಹಿತಿ, ವಾಸಸ್ಥಳ ಪ್ರಮಾಣ ಪತ್ರದ ದಾಖಲಾತಿ ಸಂಖ್ಯೆ ಮತ್ತು ದಿನಾಂಕ ನಮೂದಿಸುವಾಗ ತಪ್ಪು ಮಾಹಿತಿ ನಮೂದಿಸಿ ತಿರಸ್ಕೃತಗೊಂಡಲ್ಲಿ ಅಂತಹ ಅರ್ಜಿಗಳನ್ನು ಮರು ಪರಿಗಣಿಸಲಾಗುವುದಿಲ್ಲ. ಇದಕ್ಕೆ ಅಭ್ಯರ್ಥಿಗಳೇ ನೇರ ಹೊಣೆಗಾರರಾಗಿರುತ್ತಾರೆ.
23. Online ನಲ್ಲಿ Upload ಮಾಡಿದ ಅರ್ಜಿಗಳಲ್ಲಿ ಇಲಾಖೆ ನಿಗದಿಪಡಿಸಿದ ಯಾವುದೇ ಷರತ್ತು/ನಿಬಂಧನೆ ಸೂಚನೆಗಳನ್ನು ಪಾಲಿಸದಿದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕೃತಗೊಳಿಸಲಾಗುವುದು.
24. ಒಂದು ವೇಳೆ ಸುಳ್ಳು ದಾಖಲಾತಿಗಳನ್ನು ಸೃಷ್ಠಿಸಿ Upload ಮಾಡಿದಲ್ಲಿ, ಕಾನೂನು ಕ್ರಮ ಕೈಗೊಳ್ಳಲಾಗುವುದು.
25. ಯಾವುದೇ ಸಮಯದಲ್ಲಿ ಈ ಅಧಿಸೂಚನೆ ರದ್ದುಪಡಿಸುವ/ ಹಿಂತೆಗೆದುಕೊಳ್ಳುವ ಅಧಿಕಾರ ಸಂಬಂಧ ಪಟ್ಟ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಆಯ್ಕೆ ಸಮಿತಿ ಇವರಿಗೆ ಪ್ರದತ್ತವಾಗಿರುತ್ತದೆ.
26. ತಾತ್ಕಾಲಿಕ ಆಯ್ಕೆಯಾದ ಅಭ್ಯರ್ಥಿಗಳು ತಮ್ಮ ಆಯ್ಕೆಯನ್ನು ನಿರಾಕರಿಸಲು ಇಚ್ಚಿಸಿದಲ್ಲಿ ಕಡ್ಡಾಯವಾಗಿ ಉಪನಿರ್ದೇಶಕರು, ಮ.ಮ.ಅ.ಇ, ಇವರ ಮುಂದೆ ಖುದ್ದಾಗಿ ಹಾಜರಾಗಿ ಲಿಖಿತ ರೂಪದಲ್ಲಿ ಸಲ್ಲಿಸತಕ್ಕದ್ದು.

**ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲಾತಿಗಳು**

1. ಅರ್ಜಿ ನಿಗಧಿತ ನಮೂನೆಯಲ್ಲಿ (ಆನ್‌ಲೈನ್)
2. ಜನನ ಪ್ರಮಾಣಪತ್ರ/ಶಾಲೆಯ ವರ್ಗಾವಣೆ ಪ್ರಮಾಣ ಪತ್ರ / ಜನ್ಮ ದಿನಾಂಕ ಇರುವ ಎಸ್.ಎಸ್.ಎಲ್.ಸಿ. ಅಂಕಪಟ್ಟಿ
3. ವಿದ್ಯಾರ್ಹತೆ ಬಗ್ಗೆ ಪ್ರಮಾಣಪತ್ರ (ಕಾರ್ಯಕರ್ತೆ ಹುದ್ದೆಗೆ ಎಸ್.ಎಸ್.ಎಲ್.ಸಿ. ಗಿಂತ ಹೆಚ್ಚಿನ ವಿದ್ಯಾರ್ಹತೆ ಹೊಂದಿರುವವರು ಎಸ್.ಎಸ್.ಎಲ್.ಸಿ. ತೇರ್ಗಡೆ ಹೊಂದಿದ ಅಂಕಪಟ್ಟಿಯನ್ನು ಮಾತ್ರ ಲಗತ್ತಿಸುವುದು.)
4. ತಹಸೀಲ್ದಾರರು / ಉಪ ತಹಸೀಲ್ದಾರರಿಂದ ಪಡೆದ 3 ವರ್ಷದೊಳಗಿನ ವಾಸಸ್ಥಳ ದೃಢೀಕರಣ ಪತ್ರ
5. ವಿದ್ಯಾರ್ಹತೆ ಬಗ್ಗೆ ಪ್ರಮಾಣ ಪತ್ರ (ಸಹಾಯಕಿ ಹುದ್ದೆಗೆ ಕನಿಷ್ಠ 4ನೇ ತರಗತಿ ಉತ್ತೀರ್ಣ, ಗರಿಷ್ಠ 9ನೇ ತರಗತಿ ಉತ್ತೀರ್ಣವಾದ ಅಂಕಪಟ್ಟಿಯನ್ನು Upload ಕಡ್ಡಾಯವಾಗಿ)
6. ಮೀಸಲಾತಿ ಅಭ್ಯರ್ಥಿಗಳು ಜಾತಿ ಪ್ರಮಾಣಪತ್ರ ಲಗತ್ತಿಸುವುದು.

7. ವಿಧವೆಯಾದಲ್ಲಿ ಪತಿಯ ಮರಣ ಪ್ರಮಾಣಪತ್ರ ಕಡ್ಡಾಯವಾಗಿ ಲಗತ್ತಿಸುವುದು (ವಿಧವಾ ವೇತನದ ದೃಢೀಕರಣವನ್ನು ಪರಿಗಣಿಸುವುದಿಲ್ಲ.)
8. ಆತ್ಮಹತ್ಯೆ ಮಾಡಿಕೊಂಡ ರೈತರ ಪತ್ನಿ ಎಂದು ಉಪ ವಿಭಾಗಾಧಿಕಾರಿಗಳಿಂದ ಪಡೆದ ಪ್ರಮಾಣಪತ್ರ ಹಾಗೂ ಮರಣ ಪ್ರಮಾಣಪತ್ರ ಲಗತ್ತಿಸುವುದು.
9. ಅಂಗವಿಕಲತೆ ಪ್ರಮಾಣಪತ್ರ ಕಾರ್ಯಕರ್ತೆ ಹುದ್ದೆಗೆ ಮಾತ್ರ (ದೈಹಿಕ ಅಂಗವಿಕಲತೆ ಶೇ.60 ಮೀರದಂತೆ ಇರಬೇಕು ಅಂಗವಿಕಲರ ವೇತನದ ದೃಢೀಕರಣವನ್ನು ಪರಿಗಣಿಸುವುದಿಲ್ಲ)
10. ವಿವಾಹ ವಿಚ್ಛೇದನ ಪ್ರಮಾಣಪತ್ರ (ನ್ಯಾಯಾಲಯದಿಂದ ಪಡೆದಿರಬೇಕು.)
11. ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ವತಿಯಿಂದ ನಡೆಸಲ್ಪಟ್ಟ ಮಾಜಿ ದೇವದಾಸಿಯರ ಸಮೀಕ್ಷೆಯ ಪಟ್ಟಿಯಲ್ಲಿರುವ ಮಾಜಿ ದೇವದಾಸಿಯರ ಮಕ್ಕಳು ಎಂಬುದರ ಬಗ್ಗೆ ಮಹಿಳಾ ಅಭಿವೃದ್ಧಿ ನಿಗಮದ ಅಧಿಕಾರಿಗಳಿಂದ ಪ್ರಮಾಣಪತ್ರ.
12. ಪರಿತ್ಯಕ್ತೆ ಎಂಬ ಬಗ್ಗೆ ಗ್ರಾಮ ಪಂಚಾಯತ್ ಯಿಂದ ಪಡೆದ ಪ್ರಮಾಣಪತ್ರ
13. ಇಲಾಖೆಯ ಸುಧಾರಣಾ ಸಂಸ್ಥೆ/ರಾಜ್ಯ ಮಹಿಳಾ ನಿಲಯಗಳ ನಿವಾಸಿ ಬಗ್ಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಗಳಿಂದ ಪಡೆದ ಪ್ರಮಾಣಪತ್ರ
14. ಯೋಜನಾ ನಿರಾಶ್ರಿತರೆಂಬ ಬಗ್ಗೆ ತಹಸೀಲ್ದಾರರಿಂದ ಪಡೆದ ಪ್ರಮಾಣಪತ್ರ.
15. ಸ್ಥಳೀಯ ಸಂಸ್ಥೆಗಳ ಜನಪ್ರತಿನಿಧಿಗಳಾಗಿದ್ದಲ್ಲಿ ಕಾರ್ಯಕರ್ತೆ / ಸಹಾಯಕಿ ಹುದ್ದೆಗೆ ಆಯ್ಕೆಯಾದಲ್ಲಿ ಸದಸ್ಯತ್ವಕ್ಕೆ ರಾಜೀನಾಮೆ ನೀಡಬೇಕಾಗಿರುತ್ತದೆ

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :**

| ಕ್ರಸಂ | ಕಛೇರಿ ಹೆಸರು | ದೂರವಾಣಿ ಸಂಖ್ಯೆ |
|---|---|---|
| 1. | ಉಪನಿರ್ದೇಶಕರ ಕಛೇರಿ. ಬಳ್ಳಾರಿ | – |
| 2. | ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಸಂಡೂರು | 08395–261156 |
| 3. | ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಕೂಡ್ಲಿಗಿ | 08391–220240 |
| 4. | ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಹೊಸಪೇಟೆ | 08394–228084 |
| 5. | ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಹೂವಿನಹಡಗಲಿ | 08399–240260 |
| 6. | ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಬಳ್ಳಾರಿ (ನ) | 08392–268609 |
| 7. | ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಸಿರುಗುಪ್ಪ | 08396–220203 |
| 8. | ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಬಳ್ಳಾರಿ ಗ್ರಾಮೀಣ | 08392–266080 |
| 9. | ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಹಗರಿಬೊಮ್ಮನಹಳ್ಳಿ | 08397–238156 |
| 10. | ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಹರಪನಹಳ್ಳಿ | 08398–280251 |

ಉಪನಿರ್ದೇಶಕರು,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ಬಳ್ಳಾರಿ.

ಕರ್ನಾಟಕ ಸರ್ಕಾರ
ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬಳ್ಳಾರಿ.
OFFICE OF THE DEPUTY DIRECTOR, WOMEN AND CHILD DEVELOPMENT DEPARTMENT, BELLARY - 583102
Telephone : 08392-266219. Email : dwcdbellary@gmail.com

## Calendar of Events

ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರ ನೇಮಕಾತಿ ಪ್ರಕ್ರಿಯೆಯನ್ನು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲು ಈ ಕೆಳಕೆಂಡಂತೆ ಕ್ರಮವಹಿಸಲಾಗಿದೆ.

| WEBSITE : | www.anganwadirecruit.kar.nic.in |
|---|---|

| ದಿನಾಂಕ | ದಿನ | ವಿವರ | ಷರಾ |
|---|---|---|---|
| 22-02-2022 | – | ಆನ್‌ಲೈನ್ ನಲ್ಲಿ ಅರ್ಜಿ ಸಲ್ಲಿಸಲು ಆರಂಭದ ದಿನಾಂಕ | |
| 23-03-2023 | 30 ದಿನ | ಆನ್‌ಲೈನ್ ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | |
| 24-03-2022 ರಿಂದ 28-03-2022 ರವರೆಗೆ | 03 ದಿನ | ಆಯ್ಕೆ ಸಮಿತಿ ಸದಸ್ಯರು ಹಾಗೂ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಂದ ಸ್ವೀಕರಿಸಲಾದ ಅರ್ಜಿಗಳನ್ನು ಪರಿಶೀಲನೆ | |
| 29-03-2022 ರಿಂದ 31-03-2022 ರವರೆಗೆ | 03 ದಿನ | ಅರ್ಹರಾದ ಅಭ್ಯರ್ಥಿಗಳ ಪಟ್ಟಿಯನ್ನು ಆಯ್ಕೆ ಸಮಿತಿಯಿಂದ ಅನುಮೋದನೆ ಪಡೆಯುವುದು | |
| 01-04-2022 ರಿಂದ 07-04-2022 ರವರೆಗೆ | 07 ದಿನ | ಅಭ್ಯರ್ಥಿಗಳಿಂದ ಅಕ್ಷೇಪಣೆ ಸಲ್ಲಿಸುವಿಕೆಗೆ ಕಾಲಾವಕಾಶ | |
| 08-04-2022ರಿಂದ 13-04-2022 ರವರೆಗೆ | 06 ದಿನ | ಆಕ್ಷೇಪಣೆ ಬಂದ ಅಭ್ಯರ್ಥಿಗಳ ದಾಖಲಾತಿ ಪರಿಶೀಲನೆ | |
| 16-04-2022 ರಿಂದ 19-04-2022 ರವರೆಗೆ | 04 ದಿನ | ಪರಿಶೀಲನೆ ನಂತರ ಆಯ್ಕೆ ಸಮಿತಿಯ ಸಭೆ ನಡೆಸಿ ಅಂತಿಮ ಪಟ್ಟಿಗೆ ಅನಮೋದನೆ ಪಡೆಯುವುದು. | |

(ಮೇಲೆ ತಿಳಿಸಿದ ದಿನಾಂಕಗಳಲ್ಲಿ ಸರ್ಕಾರ ರಜೆ ಘೋಷಿಸಿದ ಸಂದರ್ಭದಲ್ಲಿ ಅಂತಹ ದಿನದ ಮಾರನೆ ದಿನದಂದು ನೇಮಕಾತಿ ಪ್ರಕ್ರಿಯೆಯನ್ನು ಕೈಗೊಳ್ಳಲಾಗುವುದು)

ಉಪನಿರ್ದೇಶಕರು,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ಬಳ್ಳಾರಿ.